**ಕರ್ನಾಟಕ ಸರ್ಕಾರ**

ಇ.ಸಂ: ಇಡಿ 112 ಯುಕೆವಿ 2022

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 17.04.2023

**ಇಂದ,**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು.

**ಇವರಿಗೆ,**
ಕುಲಸಚಿವರು,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

**ಮಾನ್ಯರೆ,**

**ವಿಷಯ:** ರಾಷ್ಟ್ರೀಯ ಶಿಕ್ಷಣ ನೀತಿ-2020ಕ್ಕೆ ಪೂರಕವಾಗಿರುವ Open Elective Course ವಿಷಯವನ್ನು ಬೋಧಿಸಲು ಸಂಯೋಜನೆ ಅವಶ್ಯಕತೆಯ ನಿರ್ದೇಶನ ಕೋರಿರುವ ಬಗ್ಗೆ.

**ಉಲ್ಲೇಖ:** ತಮ್ಮ ಪತ್ರ ಸಂಖ್ಯೆ: KU/Aca(S&T)/JS-394-A/2022-23/1316, ದಿನಾಂಕ 22.11.2022

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ವಿಶ್ವವಿದ್ಯಾಲಯದ ಎಲ್ಲಾ ಅಧೀನ ಹಾಗೂ ಸಂಲಗ್ನ ಮಹಾವಿದ್ಯಾಲಯಗಳಲ್ಲಿ 2021-22ನೇ ಸಾಲಿನಿಂದ ಜಾರಿಯಲ್ಲಿರುವ ಎಲ್ಲಾ ಸ್ನಾತಕ ಪದವಿ ಕೋರ್ಸುಗಳಿಗೆ ರಾಷ್ಟ್ರೀಯ ಶಿಕ್ಷಣ ನೀತಿ-2020ಕ್ಕೆ ಪೂರಕವಾಗಿರುವ Open Elective Course ವಿಷಯವನ್ನು ಬೋಧಿಸಲು ಸದರಿ ವಿಷಯಗಳ ಸಂಯೋಜನೆಯ ಅವಶ್ಯಕತೆಯ ಕುರಿತಂತೆ ಕೆಲವು ಅಂಶಗಳ ಬಗ್ಗೆ ಅಭಿಪ್ರಾಯ ಕೋರಿ ಉಲ್ಲೇಖಿತ ಪತ್ರದಲ್ಲಿ ಸರ್ಕಾರಕ್ಕೆ ಸಲ್ಲಿಕೆಯಾಗಿದ್ದ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು.

ರಾಜ್ಯದಲ್ಲಿ 2021-22ನೇ ಸಾಲಿನಿಂದ ರಾಷ್ಟ್ರೀಯ ಶಿಕ್ಷಣ ನೀತಿ-2020 ಯನ್ನು ಅನುಷ್ಠಾನಗೊಳಿಸಿದ ಹಿನ್ನೆಲೆಯಲ್ಲಿ ವಿಶ್ವವಿದ್ಯಾಲಯಗಳು ಕಾಲೇಜುಗಳಲ್ಲಿ ನಡೆಸುವ ವಿವಿಧ ಪದವಿಗಳ ವಿಷಯವಾರು ಸಂಯೋಜನೆಯನ್ನು ನೀಡುತ್ತಿವೆ. ಸಂಯೋಜನೆ ಹೊಂದಿದ ವಿಷಯಗಳಲ್ಲಿ Open Elective Course ಗೆ ಸಂಬಂಧಿಸಿದ ವಿಷಯ ಒಳಗೊಂಡಿದರೆ, ಪ್ರತ್ಯೇಕವಾಗಿ ಸಂಯೋಜನೆ ಪಡೆಯುವ ಅಗತ್ಯವಿಲ್ಲ. ಆದರೆ ಸಂಯೋಜನೆ ಹೊಂದಿದ ವಿಷಯಗಳನ್ನು ಹೊರತುಪಡಿಸಿ Open Elective Course ಗಳನು ಬೋಧಿಸುತ್ತಿದ್ದರೆ ಅಂತಹ ವಿಷಯಗಳಿಗೆ ಸಂಯೋಜನೆಯನ್ನು ಪಡೆಯಬೇಕಾಗುತ್ತದೆ.

ಒಂದು ವೇಳೆ ಕಾಲೇಜುಗಳು ಸಂಯೋಜನೆ ಪಡೆಯದ ಯಾವುದೇ ವಿಷಯದ Open Elective Course ನ್ನು ಕಾಲೇಜುಗಳು ಬೋಧಿಸಲು ಇಚ್ಛಿಸಿದರೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಅದಕ್ಕೆ ಬೇಕಾದ ವ್ಯವಸ್ಥೆ ಕಲ್ಪಿಸಿ (BoS, BoE ಇತ್ಯಾದಿ) ಕಾಲೇಜುಗಳಿಗೆ ಅನುವು ಮಾಡಿಕೊಡಬಹುದು. ಎರಡನೆಯದಾಗಿ,

ಗ್ರಂಥಪಾಲಕರು ಹಾಗೂ ಶಾರೀರಿಕ ಶಿಕ್ಷಕರು ನೇಮಕವಾಗಿರುವುದು ಅವರದೇ ಆದ ಪ್ರತ್ಯೇಕ ಕೆಲಸ-ಕಾರ್ಯಗಳ ನಿರ್ವಹಣೆಗಾಗಿ. ಅವರನ್ನು Open Elective Course ಗಳ ಬೋಧನಾ ಕಾರ್ಯಗಳಿಗೆ ಬಳಸಿಕೊಂಡರೆ ಅವರ ಮೂಲ ಕೆಲಸ ಕಾರ್ಯಗಳು ಕುಂಠಿತಗೊಳ್ಳುತ್ತವೆ. ಅಲ್ಲದೆ, Open Elective Course ಗಳ ಜೊತೆಗೆ ಪದವಿ ಪ್ರೋಗ್ರಾಂ ಗಳಲ್ಲಿ Value Based Courses (Sports, Health & Wellness, NCC, NSS, Scouts & Guides ಇತ್ಯಾದಿ) [illegible] ಕಲಿಸಬೇಕಾಗಿರುವುದರಿಂದ ಇವುಗಳನ್ನು ಬೋಧಿಸುವ ಜವಾಬ್ದಾರಿ ಕಾಲೇಜುಗಳಲ್ಲಿ ಇರುವ ದೈಹಿಕ ಶಿಕ್ಷಣ (Physical Education Directors/Instructors) ನಿರ್ವಹಿಸಬೇಕಾಗುತ್ತದೆ. ಜೊತೆಗೆ ಅವರು Open Elective ವಿಷಯಗಳನ್ನು ಬೋಧಿಸಲು ಯು.ಜಿ.ಸಿ. ನಿಯಮಗಳನುಸಾರ ಶಿಕ್ಷಕರ ನೇಮಕಾತಿಗೆ ಇರಬೇಕಾದ ವಿದ್ಯಾರ್ಹತೆಯನ್ನು ಹೊಂದಿರಬೇಕಾಗುತ್ತದೆ. ವಿದ್ಯಾರ್ಹತೆ ಹೊಂದಿದ್ದರೂ ಸಹ, ಮೇಲೆ ಹೇಳಿರುವಂತೆ ಅವರು ಮೂಲ ಕೆಲಸದ ಹೊರೆಗೆ (Workload) ತೊಂದರೆಯಾಗುತ್ತದೆ ಎಂದು ತಮಗೆ ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ನಂಬುಗೆಯ,

(ನಂದಕುಮಾರ್ ಬಿ.)
ಸರ್ಕಾರದ ಅಧೀನ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-2)